

ಫ್ರಾನ್ಜ್ ಮೆಸ್ಮರ್



‘ಡಾಕ್ಟರೇ ನನ್ನ ಮಗ ಬುದ್ಧಿವಂತ. ಪಿಯುಸಿಗೆ ಬಂದ ಮೇಲೆ ಓದಿನಲ್ಲಿ ಅವನಿಗೆ ಆಸಕ್ತಿಯೇ ಇಲ್ಲ. ಸದಾ ಮೊಬೈಲ್, ಕಂಪ್ಯೂಟರ್, ಸ್ನೇಹಿತರು, ಮೋಜು ಮಸ್ತಿಯಲ್ಲೇ ಇರುತ್ತಾನೆ. ಬುದ್ಧಿ ಹೇಳಿದರೆ ಸಿಟ್ಟಾಗುತ್ತಾನೆ. ಹಿಪ್ನೋಟೈಸ್ ಮಾಡಿ ಮತ್ತೆ ಓದಿನಲ್ಲಿ ಆಸಕ್ತಿ ತೋರಿಸುವಂತೆ ಮಾಡಿ.’

‘ಸರ್ ಮದುವೆ ವಯಸ್ಸಿಗೆ ಬಂದ ಮಗಳಿದ್ದಾಳೆ. ನನಗೆ ಮದುವೆ ಬೇಡ ಎನ್ನುತ್ತಾಳೆ. ಏಕೆ ಎಂದರೆ, ಕಾರಣ ಏನೆಂದು ಹೇಳುವುದಿಲ್ಲ. ಯಾರನ್ನಾದರೂ ಪ್ರೀತಿಸುತ್ತೀಯಾ ಹೇಳು. ಅವನನ್ನೇ ಮದುವೆಯಾಗುವಿಯಂತೆ ಎಂದರೆ ಅಂಥದ್ದೇನಿಲ್ಲ ಎನ್ನುತ್ತಾಳೆ. ಹಿಪ್ನೋಸಿಸ್ ಮಾಡಿ ಅವಳ ಮನಸ್ಸಿನಲ್ಲಿ ಏನಿದೆ ಎಂದು ತಿಳಿಯಲು ಸಾಧ್ಯವೇ?’

‘ನನ್ನ ಗಂಡನ ಬಗ್ಗೆ ನನಗೆ ಅನುಮಾನವಿದೆ. ಅವರಿಗೆ ಯಾರೋ ಲವರ್ ಇದ್ದಾಳೆ. ಯಾರು ಎಂದು ತಿಳಿದುಕೊಳ್ಳಬೇಕಲ್ಲ. ಹಿಪ್ನೋಟೈಸ್ ಮಾಡಿದರೆ ತಿಳಿಯಬಹುದೇ?’

‘ಅವಳಿಗೆ ಅಡುಗೆ ಮಾಡಲು ಬರುತ್ತದೆ; ಮಾಡುವುದಿಲ್ಲ. ಸೋಮಾರಿ. ಒಂದು ಮುದ್ದಾದ ಮಗುವಿದೆ. ಅದನ್ನು ನೋಡಿಕೊಳ್ಳುವುದಿಲ್ಲ. ನನ್ನ ತಾಯಿ ಅಥವಾ ಆಕೆಯ ತಾಯಿಗೆ ಒಪ್ಪಿಸಿ ಹೊರಗಡೆ ಸುತ್ತಾಡಲು ಹೋಗುತ್ತಾಳೆ. ಕಿಟ್ಟಿ ಪಾರ್ಟಿ, ಪಿಕ್ನಿಕ್, ಗೆಟ್‌ಟುಗೆದರ್ ಅಂತ ಓಡಾಡುತ್ತಾಳೆ. ಹಿಪ್ನೋಸಿಸ್ ಮಾಡಿ ಅವಳನ್ನು ಸರಿಪಡಿಸಿ.’

‘ವೇದಿಕೆಯ ಮೇಲೆ ಹೋಗಬೇಕು. ಚೆನ್ನಾಗಿ ಮಾತಾಡಬೇಕು; ಹಾಡಬೇಕು; ಅಭಿನಯಿಸಬೇಕು ಅಂತ ಆಸೆ. ಪ್ರತಿಭೆಯೂ ಇದೆ. ಆದರೆ ವೇದಿಕೆ ಕಂಡರೆ ಭಯ. ಎದೆ ಢವಢವ, ಬಾಯಿ ಒಣಗಿ ಮಾತೇ ಹೊರಡದು. ಹಿಪ್ನೋಸಿಸ್‌ನಿಂದ ನನ್ನ ಭಯವನ್ನು ತೆಗೆಯಲು ಸಾಧ್ಯವೇ?’

‘ಹಿಪ್ನೋಟೈಸ್ ಮಾಡಿ ಧೂಮಪಾನ, ಮದ್ಯಪಾನ ಚಟವನ್ನು ಬಿಡಿಸಬಹುದೇ? ನಮ್ಮ ತಂದೆಯನ್ನು ನಾಲ್ಕೈದು ಡಿ–ಅಡಿಕ್ಷನ್ ಸೆಂಟರ್‌ಗಳಿಗೆ ಸೇರಿಸಿದೆವು. ಬಿಡುತ್ತಾರೆ ಮತ್ತೆ ಶುರು ಮಾಡುತ್ತಾರೆ. ಅವರ ಚಟ ಬಿಡಿಸಿ.’

‘ನನಗೆ ವಿಪರೀತ ಬೆನ್ನುನೋವಿದೆ. ಸುಸ್ತು. ಮೂಳೆತಜ್ಞರ ಚಿಕಿತ್ಸೆ ಆಯಿತು. ಆಯುರ್ವೇದ, ಹೋಮಿಯೋಪತಿಯೂ ಆಯಿತು. ನೋವು ಕಡಿಮೆಯಾಗಿಲ್ಲ. ಮೊನ್ನೆ ಟಿವಿಯಲ್ಲಿ ಪುನರ್ಜನ್ಮ ಚಿಕಿತ್ಸೆಯಿಂದ ಇಂತಹ ನೋವನ್ನು ವಾಸಿ ಮಾಡಲಾಗುತ್ತದೆ; ಹಿಪ್ನೋಟೈಸ್ ಮಾಡಿ. ಹಿಂದಿನ ಜನ್ಮದ ಪಾಪಕರ್ಮಗಳು ನೆನಪಿಗೆ ಬರುವಂತೆ ಮಾಡಿ ಪರಿಹಾರ ನೀಡಲಾಗುತ್ತದೆ ಎಂದು ಹೇಳಿದರು. ಇದು ನಿಜವೇ?’

‘ನನ್ನನ್ನು ಪ್ರೀತಿಸುತ್ತಿದ್ದ, ನೀನೇ ನನ್ನ ಪ್ರಾಣ ಎನ್ನುತ್ತಿದ್ದ ಹುಡುಗಿ, ನನ್ನನ್ನು ಬಿಟ್ಟು ಇನ್ನೊಬ್ಬನ ಜೊತೆ ಓಡಾಡುತ್ತಿದ್ದಾಳೆ. ಫೋನ್ ಮಾಡಿದರೆ ಕಟ್ ಮಾಡುತ್ತಾಳೆ. ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸಿದೆ. ಹಿಪ್ನೋಸಿಸ್ ತಂತ್ರದಿಂದ ಅವಳ ಮನಸ್ಸನ್ನು ಬದಲಿಸಿ, ಮತ್ತೆ ನನ್ನನ್ನೇ ಪ್ರೀತಿಸುವ ಹಾಗೆ ಮಾಡಿ ಸಾರ್.’

‘ಕಳ್ಳರು, ಸುಳ್ಳರು, ಮೋಸಗಾರರು ತಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ. ನಿಜವನ್ನು ಹೇಳುವುದಿಲ್ಲ. ಹಿಪ್ನೋಸಿಸ್‌ನಿಂದ ಅವರು ನಿಜ ಹೇಳುವಂತೆ ಮಾಡಲು ಸಾಧ್ಯವಿಲ್ಲವೇ?’

‘ನನಗೆ ಏಕಾಗ್ರತೆ ಇಲ್ಲ. ಮನಸ್ಸು ವಿಪರೀತ ಚಂಚಲವಾಗಿದೆ. ಅಧ್ಯಯನ ಮಾಡಲು ಕುಳಿತರೆ, ಇತರ ಆಸೆ, ಆಕರ್ಷಣೆಗಳು ಬರುತ್ತವೆ. ಹೀಗಾದರೆ ನಾನು ಫೇಲಾಗುತ್ತೇನೆ. ಏಕಾಗ್ರತೆ ಹೆಚ್ಚಿಸಲು ಸೆಲ್ಫ್ ಹಿಪ್ನೋಸಿಸ್ ಉಪಯುಕ್ತವಂತೆ ನಿಜವೇ?’